O.S.No. 82/2022
PW -2

ದಿನಾಂಕ 16/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಶ್ರೀ ಪಿ.ಆರ್.ಪಿ. ಪ್ರತಿವಾದಿ ಪರ ವಕೀಲರಿಂದ**

ನಾನು 10 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಚಾರಗಳು ನನಗೆ ಗೊತ್ತಿರುತ್ತದೆ. ದಾವಾ ಸರ್ವೆ ನಂ- 43/2 ಇರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಜಮೀನು ಪಕ್ಕ ನನ್ನ ಜಮೀನಿನ ಎಂದು ಹೇಳಿರುತ್ತೇನೆ ಎಂದರೆ ಸರಿ. ನಮ್ಮ ಸರ್ವೆ ನಂ- 132/4 ಇರುತ್ತದೆ ಎಂದರೆ ಸರಿ. ನನ್ನ ಜಮೀನು ಮುಖ್ಯ ರಸ್ತೆ ಹೊರಕೆರೆ - ರಂಟವಾಳಕ್ಕೆ ಹೋಗುವ ರಸ್ತೆಯಲ್ಲಿ ಬರುತ್ತದೆ. ನನ್ನ ಜಮೀನು ನಮ್ಮ ಊರು ಆದ ನಂತರ ಹೊಸಕೆರೆ ಕಡೆಗೆ ಹೋಗುವ ಕಡೆ ಇರುತ್ತದೆ. ದಾವಾ ಆಸ್ತಿ ನಮ್ಮ ಊರಿನಿಂದ ಆಂಧ್ರ ಕಡೆಗೆ ಹೋಗುವ ಗಡಿ ಭಾಗದಲ್ಲಿ ಬರುತ್ತದೆ.

2. ನಮ್ಮ ಊರಿನಿಂದ ದಾವಾ ಆಸ್ತಿ ಸುಮಾರು 100 ಮೀಟರ್ ದೂರದಲ್ಲಿರುತ್ತದೆ. ದಾವಾ ಆಸ್ತಿ ನಮ್ಮ ಊರಿನಿಂದ 2 ಕಿ.ಮೀಟರ್ ದೂರದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿಂದ ದಾವಾ ಆಸ್ತಿ ಮುಕ್ಕಾಲು ಕಿ.ಮೀಟರ್ ದೂರದಲ್ಲಿರುತ್ತದೆ. ನಮ್ಮ ಜಮೀನಿಂದ ದಾವಾ ಜಮೀನಿಗೆ 4 ಕಿ.ಮೀಟರ್ ಆಗುತ್ತದೆ ಎಂದರೆ ಸರಿಯಲ್ಲ. ದಾವಾ ಸರ್ವೆನಂ-43/2 ರ ಅಕ್ಕ ಪಕ್ಕ ನನಗೆ ಸೇರಿದ ಜಮೀನು ಇರುವುದಿಲ್ಲ. ಗಂಪಲಹಳ್ಳಿ ಗ್ರಾಮದ ಹೀರಜಪ್ಪನ ಮಗ ವೀರಪ್ಪ ಎಂದರೆ ವಾದಿಯ ತಾತ ಎಂದರೆ ಸರಿ. ಹೀರಪ್ಪ ಬಿನ್ ಹೀರಪ್ಪ ಎಂದರೆ ವಾದಿಯ ತಂದೆ ಎಂದರೆ ಸರಿ.

3. ದಾವಾ ಆಸ್ತಿಗಳು ಜೋಡಿ ಗ್ರಾಮದ ಆಸ್ತಿಗಳು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು 1967-68 ನೇ ಸಾಲಿನಲ್ಲಿ ನಮ್ಮ ಊರಿನ ಬ್ರಾಹ್ಮಣರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಮೇಲೆ ಹೇಳಿದ ಜಮೀನುಗಳಿಗೆ ಲಗತ್ತಾಗಿ ದಾವಾ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ-43/2 ಚಕ್ಕುಬಂದಿ ನಾಲ್ಕು ಬದಿಗಳಲ್ಲಿ ಸುಬ್ರಮಣ್ಯಂ ಜಮೀನು ಇದ್ದು ಸದರಿ ಜಮೀನು ವಾದಿಯ ತಂದೆ ಮತ್ತು ತಾತ ಚಿಕ್ಕತಿಮ್ಮಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1967 ರಿಂದ ಇಲ್ಲಿಯವರೆಗೂ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಚಕ್ಕುಬಂದಿ ಪೂ-ಶಿವರತ್ನಮ್ಮ ರವರ ಜಮೀನು, ಪ-ರಸ್ತೆ , ಉ-ಚಿನ್ನಪ್ಪ ಜಮೀನು ಮತ್ತು ದ-ಲಿಂಗಪ್ಪ ರವರ ಜಮೀನು ಇರುತ್ತದೆ. ದಕ್ಷಿಣಕ್ಕೆ ಇರುವ ಲಿಂಗಪ್ಪ ರವರು ಅವರ ಜಮೀನನ್ನು ಸುಬ್ರಮಣ್ಯಂ ರವರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿ ಎಂದಿಗೂ ಬೆಳೆ ಇಟ್ಟಿರುವುದಿಲ್ಲ, ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ನಮ್ಮ ಊರಿನವರು ಎಂದರೆ ಸರಿ. ಪ್ರತಿವಾದಿಗಳು ಪಿಲಗುಂಡಗ್ರಾಮದವರು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ನಮ್ಮ ಊರವರು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ ಎಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಓ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ